ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೨

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೈದನೇ ಅಧಿವೇಶನ**

**ಮಂಗಳವಾರ, ದಿನಾಂಕ: ೨೪ನೇ ಜೂನ್, ೨೦೧೪**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

**ತೋಟಗಾರಿಕೆ ಕ್ಷೇತ್ರಗಳು**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು )** –

೧೬ (೮೯) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ತೋಟಗಾರಿಕಾ ಕ್ಷೇತ್ರಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕ್ಷೇತ್ರಗಳ ನಿರ್ವಹಣೆ ಮಾಡುತ್ತಿರುವವರು ಯಾರು ;

(ಇ) ಕಳೆದ ಐದು ವರ್ಷಗಳಲ್ಲಿ ಖರ್ಚು ಮಾಡಿರುವ ಬಗ್ಗೆ ಹಾಗೂ ಬಂದಿರುವ ಆದಾಯದ ಬಗ್ಗೆ ಕ್ಷೇತ್ರವಾರು ಸಮಗ್ರ ವಿವರ ನೀಡುವುದು ;

ಈ) ಯಾವ ಮಾನದಂಡದ ಮೂಲಕ ಕ್ಷೇತ್ರಗಳನ್ನು ವಿತರಣೆ ಮಾಡಲಾಗುತ್ತಿದೆ ;

ಉ) ಆದಾಯ ಮಾಡಿ ಕೊಡಲು ಮುಂದೆ ಬರುವಂತಹ ಸಂಘ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳಿಗೆ ಯಾವ ಮಾನದಂಡದ ಮೂಲಕ ಕೊಡಲಾಗುವುದು ?

## ಜೆಸ್ಕಾಂ ಜಾಗೃತದಳದ ಕಛೇರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೧೭ (೪೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಪ್ಪಳ ಜಿಲ್ಲೆಯಲ್ಲಿ ಜೆಸ್ಕಾಂ ಜಾಗೃತದಳದ ಕಛೇರಿ ಎಲ್ಲಿ ಕಾರ್ಯನಿರ್ವಹಿಸುತ್ತಿದೆ ; ಕಳೆದ ಅಧಿವೇಶನದಲ್ಲಿ ಸದರಿ ಕಛೇರಿಯನ್ನು ಸ್ಥಳಾಂತರಿಸಲಾಗುವುದು ಎಂದು ಮಾನ್ಯ ಸಚಿವರು ನೀಡಿದ ಹೇಳಿಕೆಯಂತೆ ಕಛೇರಿಯನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆಯೇ ;

(ಆ) ಇಲ್ಲವಾದಲ್ಲಿ, ಕಛೇರಿ ಸ್ಥಳಾಂತರಕ್ಕೆ ವಿಳಂಬವಾಗುತ್ತಿರಲು ಕಾರಣಗಳೇನು ;

(ಇ) ಸದರಿ ಕಾರ್ಯಾಲಯ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ ;

ಈ) ಜಿಲ್ಲಾ ಕೇಂದ್ರಸ್ಥಾನದಲ್ಲಿ ಇರಬೇಕಾದ ಕಛೇರಿ ಬೇರೆ ಕಡೆ ಇರುವುದರಿಂದ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ದೂರುಗಳನ್ನೇನಾದರೂ ಪಡೆಯಲಾಗಿದೆಯೇ ;

ಉ) ಸದರಿ ಕಾರ್ಯಾಲಯದಲ್ಲಿ ಇರುವ ಸಿಬ್ಬಂದಿಗಳ ಮಾಹಿತಿ ನೀಡುವುದು ?

## ರೈತರಿಗೆ ಸೋಲಾರ್ ಪಂಪ್‌ಸೆಟ್ ಸೌಲಭ್ಯ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮ (೦೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸೋಲಾರ್ ಪಂಪ್‌ಸೆಟ್ ಅನುಕೂಲತೆಯನ್ನು ರೈತರಿಗೆ ಒದಗಿಸಲು ಇಲಾಖೆಯಲ್ಲಿ ಅನುಸರಿಸುತ್ತಿರುವ ಹಾಗೂ ಜಾರಿಯಲ್ಲಿರುವ ನಿಯಮಗಳೇನು ;

(ಆ) ಈ ಸಾಲಿನ ಗುರಿ ಮತ್ತು ಅದರಡಿಯಲ್ಲಿ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಇ) ಸದರಿ ಗುರಿಯನ್ನು ತಲುಪಲು ಇಲಾಖೆ ಈವರೆವಿಗೂ ತೆಗೆದುಕೊಂಡ ಹಾಗೂ ತೆಗೆದುಕೊಳ್ಳುತ್ತಿರುವ ಕ್ರಮಗಳೇನು ?

## ತೋಟಗಾರಿಕೆ ಉತ್ಪನ್ನಗಳಿಗೆ ವಿದೇಶದಿಂದ ರಫ್ತು ನಿಷೇಧ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೯ (೭೭) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅಲ್ಫೋನ್ಸಾ ಮಾವಿನಹಣ್ಣು, ವೀಳ್ಯದೆಲೆ, ಕೆಸುವಿನ ಗಡ್ಡೆ, ಹಾಗಲಕಾಯಿ, ಗುಳ್ಳಬದನೆ, ಪಡುವಲ ಕಾಯಿ ತರಕಾರಿಗೆ ವಿದೇಶಗಳು ರಫ್ತು ನಿಷೇಧ ಹೇರಿರುವುದು ನಿಜವೇ ; (ವಿವರ ನೀಡುವುದು)

(ಆ) ಇವಲ್ಲದೆ ಇನ್ನೂ ಯಾವ ಆಹಾರ ಪದಾರ್ಥಗಳಿಗೆ ನಿಷೇಧ ಹೇರಲಾಗಿದೆ ;

(ಇ) ಈ ರೀತಿಯ ನಿಷೇಧ ಹೇರಲು ವೈಜ್ಞಾನಿಕ ಕಾರಣಗಳೇನು ? (ವಿವರ ನೀಡುವುದು)

## ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೨೦ (೦೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಎಷ್ಟು ಟೋಲ್ ಸಂಗ್ರಹ ಕೇಂದ್ರಗಳಿವೆ ; (ವಿವರ ನೀಡುವುದು)

(ಆ) ಸದರಿ ರಸ್ತೆಗಳಲ್ಲಿ ಟೋಲ್ ಸಂಗ್ರಹಿಸಲು ಎಷ್ಟು ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ ;

(ಇ) ಟೋಲ್ ಸಂಗ್ರಹಿಸುವ ಕಂಪನಿಗಳ ಆಯ್ಕೆಗೆ ಅನುಸರಿಸುವ ನಿಯಮಗಳೇನು ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಈ ಟೋಲ್ ಸಂಗ್ರಹ ಕೇಂದ್ರಗಳ ಮುಖಾಂತರ ದಿನ ಒಂದಕ್ಕೆ ಎಷ್ಟ ಟೋಲ್ ಮೊತ್ತ ಸಂಗ್ರಹವಾಗುತ್ತದೆ ; (ಟೋಲ್ ಕೇಂದ್ರವಾರು ವಿವರ ಒದಗಿಸುವುದು)

(ಉ) ಸಂಗ್ರಹಿಸಿದ ಟೋಲ್ ಶುಲ್ಕವನ್ನು ಯಾವ ರೀತಿ ಬಳಸಲಾಗುತ್ತಿದೆ ? (ವಿವರ ನೀಡುವುದು)

## ರಾಸಾಯನಯುಕ್ತ ಹಣ್ಣುಗಳ ಮಾರಾಟ ನಿಷೇಧಕ್ಕೆ ಕೈಗೊಳ್ಳುವ ಕ್ರಮಗಳು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೧ (೪೮) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾನಿಕಾರಕ ರಾಸಾಯನಿಕಗಳನ್ನು ಬಳಸಿ ಕೃತಕ ಹಣ್ಣು ಮಾಡಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ಹಣ್ಣುಗಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ಕ್ರಮಗಳೇನು ;

(ಆ) ಮಾರುಕಟ್ಟೆಯಲ್ಲಿ ಬರುವ ಬಹುತೇಕ ಬಾಳೇಹಣ್ಣು, ಮಾವಿನಹಣ್ಣು, ಸಪೋಟಾ ಇವುಗಳನ್ನು ಬೇಗ ಹಣ್ಣಾಗಿಸಲು ಕ್ಯಾಲ್ಸಿಯಂ ಕಾರ್ಬೈಟ್ ನಂತಹ ಕ್ಯಾನ್ಸರ್ ಕಾರಕ ರಾಸಾಯನಿಕ ಬಳಸುತ್ತಿರುವ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ; ಈವರೆಗೂ ಶಿಕ್ಷಿಸಿದ ಪ್ರಕರಣಗಳೆಷ್ಟು ;

(ಇ) ಆರೋಗ್ಯಕ್ಕೆ ಹಾನಿಕಾರಕವಲ್ಲದ/ಪೂರಕವಾದ ರಾಸಾಯನಿಕ ಬಳಸುವುದನ್ನು ಮತ್ತು ನೈಸರ್ಗಿಕ ವಿಧಾನಗಳನ್ನು ಅಭಿವೃದ್ಧಿಪಡಿಸಿ ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಆಹಾರ ಸುರಕ್ಷತೆ, ಗುಣಮಟ್ಟ ಕಾಯಿದೆ ಅಡಿ ಆಹಾರ ಸುರಕ್ಷತಾ ಪರವಾನಗಿ/ ನೋಂದಣಿ ಪತ್ರವನ್ನು ಹಣ್ಣು ವ್ಯಾಪಾರಸ್ಥರು, ಮಾರಾಟಗಾರರು ಹೊಂದಿರುವುದನ್ನು ಪರಿಶೀಲಿಸಲಾಗುತ್ತಿದೆಯೇ ?

**ಇಂಧನ ಇಲಾಖಾ ನಿಗಮಗಳ ನೇಮಕಾತಿಗಳಲ್ಲಿ ಮಹಿಳಾ ಮೀಸಲಾತಿ**

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು)** –

೨೨ (೭೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಉದ್ಯೋಗದಲ್ಲಿ ಜಾರಿಗೊಳಿಸುತ್ತಿರುವ 'ಮಹಿಳಾ ಮೀಸಲಾತಿ' ಆದೇಶಗಳನ್ನು ಇಂಧನ ಇಲಾಖೆಯ ಅಧೀನ ನಿಗಮಗಳು ಜಾರಿಗೊಳಿಸುತ್ತಿವೆಯೇ ; ಇದ್ದಲ್ಲಿ, ನಿಗಮವಾರು, ದರ್ಜೆವಾರು ಮತ್ತು ಶೇಕಡಾವಾರು ಉದ್ಯೋಗಿಗಳ ವಿವರಗಳನ್ನು ನೀಡುವುದು ;

(ಆ) ಶೇ. ೩೦ರಷ್ಟು ಭರ್ತಿ ಮಾಡದಿರುವ ವಿವಿಧ ದರ್ಜೆ ನೌಕರರನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಸುವರ್ಣಾವತಿ ನದಿ ಸೇತುವೆಯ ಶಿಥಿಲತೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೩ (೫೮) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಯಳಂದೂರು ಪಟ್ಟಣದಲ್ಲಿ ಸುವರ್ಣಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸೇತುವೆಯ ಶಿಥಿಲತೆ ಬಗ್ಗೆ ತಜ್ಞರ ವರದಿ ತರಿಸಿಕೊಂಡು ಸೇತುವೆಯ ರಿಪೇರಿಗೆ ಅಥವಾ ಹೊಸದಾಗಿ ಬೇರೆ ಸೇತುವೆಯನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಈ ಸೇತುವೆ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು, ವಾಹನ ಸಂಚಾರ ಹೆಚ್ಚಾಗಿರುವುದರಿಂದ ಸಂಭವನೀಯ ಅಪಾಯ ತಪ್ಪಿಸಲು ಶೀಘ್ರವಾಗಿ ರಿಪೇರಿ ಕಾರ್ಯ ಮತ್ತು ಸೇತುವೆ ಕಿರಿದಾಗಿರುವುದರಿಂದ ಹೆದ್ದಾರಿ ಪ್ರಮಾಣಕ್ಕೆ ಅನುಗುಣವಾಗಿ ದೊಡ್ಡ ಸೇತುವೆ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಕಬ್ಬಿಗೆ ಪ್ರೋತ್ಸಾಹಧನ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೨೪ (೭೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ ; ಸದರಿ ಸಕ್ಕರೆ ಕಾರ್ಖಾನೆಗಳು ಯಾವ ಸ್ವಾಮ್ಯದ ಆಡಳಿತಕ್ಕೊಳಪಟ್ಟಿವೆ :

(ಆ) ಸದರಿ ಕಾರ್ಖಾನೆಗಳಿಗೆ ಪ್ರಸಕ್ತ ಸಾಲಿನಲ್ಲಿ ಸರಬರಾಜಾಗುತ್ತಿರುವ ಪ್ರತಿ ಟನ್ ಕಬ್ಬಿಗೆ ರಾಜ್ಯ ಸರ್ಕಾರ ಎಷ್ಟು ದರ ನಿಗದಿಗೊಳಿಸಿದೆ ;

(ಇ) ಪ್ರಸಕ್ತ ಸಾಲಿನಲ್ಲಿ ಸರಬರಾಜಾಗುತ್ತಿರುವ ಕಬ್ಬಿಗೆ ರಾಜ್ಯ ಸರ್ಕಾರ ಪ್ರೋತ್ಸಾಹಧನ ಘೋಷಿಸಿದೆಯೇ ; ಹಾಗಾದರೆ ಒಂದು ಟನ್ ಕಬ್ಬಿಗೆ ಎಷ್ಟು ಪ್ರೋತ್ಸಾಹ ಧನವನ್ನು ಘೋಷಿಸಿ ನೀಡಲಾಗುತ್ತಿದೆ ;

ಈ) ಸದರಿ ಕಾರ್ಖಾನೆಗಳಿಗೆ ಇದುವರೆವಿಗೂ ಎಷ್ಟು ಮಂದಿ ರೈತರು, ಎಷ್ಟು ಪ್ರಮಾಣದ ಕಬ್ಬನ್ನು ಸರಬರಾಜು ಮಾಡಿದ್ದಾರೆ ; (ವಿವರ ನೀಡುವುದು)

ಉ) ಸದರಿ ಕಾರ್ಖಾನೆಗಳು ಸರ್ಕಾರ ನಿಗದಿಪಡಿಸಿರುವ ಬೆಲೆಯನ್ನು ರೈತರಿಗೆ ಪಾವತಿಸುತ್ತಿವೆಯೇ ; ಇದುವರೆವಿಗೂ ಸರಬರಾಜಾಗಿರುವ ಕಬ್ಬಿಗೆ ಪಾವತಿಸಿರುವ ಒಟ್ಟು ಮೊತ್ತವೆಷ್ಟು ;

(ಊ) ಯಾವ ಕಾರ್ಖಾನೆಗಳಿಂದ ಸರಬರಾಜು ಮಾಡಿರುವ ಕಬ್ಬಿನ ಸಂಬಂಧ ಎಷ್ಟು ಬಾಕಿ ಮೊತ್ತವನ್ನು ಪಾವತಿಸಬೇಕಾಗಿದೆ ; ಬಾಕಿ ಮೊತ್ತವನ್ನು ಪಾವತಿಸುವಲ್ಲಿ ವಿಳಂಬ ಉಂಟಾಗಿರುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ದಾರಿ ದೀಪಗಳ ಸೋಲಾರೀಕರಣ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫ (೬೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಸ್ತುತ ವರ್ಷ ೫೦೦ ಮೆಗಾವ್ಯಾಟ್ ವಿದ್ಯುತ್ತನ್ನು ಸೋಲಾರ್‌ನಿಂದ ಉತ್ಪಾದನೆ ಮಾಡಬಹುದೆಂಬ ನಿರೀಕ್ಷೆ ನಿಜವೇ ;

(ಆ) ಸದರಿ ಯೋಜನೆಯ ಸ್ವರೂಪಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ರಾಜ್ಯದ ದಾರಿ ದೀಪಗಳನ್ನು ಸೋಲಾರೀಕರಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಬೆಂಗಳೂರು–ಬಂಟ್ವಾಳ ರಾಜ್ಯ ಹೆದ್ದಾರಿಗೆ ಸಂಬಂಧಿಸಿದಂತೆ

**ಶ್ರೀ ಸಿದ್ದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) –**

೨೬ (೫೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು **ತಿಳಿಸುವರೆ –**

(ಅ) ಬೆಂಗಳೂರು–ಬಂಟ್ವಾಳ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಲಾಗಿದೆಯೇ ; ಘೋಷಿಸಿದ್ದರೆ, ಅದು ಯಾವ ಮಾರ್ಗವಾಗಿ ಸಾಗುತ್ತದೆ ; (ವಿವರ ಒದಗಿಸುವುದು) ಮತ್ತು ಎಷ್ಟು ಪಥಗಳಲ್ಲಿ ರಸ್ತೆ ನಿರ್ಮಿಸಲಾಗುತ್ತದೆ ;

(ಆ) ಮೇಲ್ಕಂಡ ಹೆದ್ದಾರಿಗೆ ಎಲ್ಲೆಲ್ಲಿ ಟೋಲ್‌ನ್ನು ನಿರ್ಮಿಸುವ ಯೋಜನೆ ಇದೆ ; ಎಷ್ಟು ಶುಲ್ಕ ನಿಗದಿಪಡಿಸಲಾಗುವುದು ; (ವಿವರ ಒದಗಿಸುವುದು)

(ಇ) ಈ ರಸ್ತೆಗೆ ಎಲ್ಲೆಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ; ಭೂಸ್ವಾಧೀನಪಡಿಸಿಕೊಂಡಿದ್ದರೆ ನೀಡುತ್ತಿರುವ ಪರಿಹಾರ ಧನವೆಷ್ಟು ; ಅದರಲ್ಲಿ ಕೃಷಿ ಜಮೀನೆಷ್ಟು ? (ವಿವರ ನೀಡುವುದು)

## ೨೦೧೩ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ತೊಗರಿ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೭ (೫೬) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಎಷ್ಟು ಕ್ಷೇತ್ರದಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ ; ಎಷ್ಟು ಇಳುವರಿ ಬಂದಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ತೊಗರಿ ಬೆಳೆಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ ಕನಿಷ್ಟ ಬೆಂಬಲ ಬೆಲೆ (ಎಂ.ಎಸ್.ಪಿ) ಎಷ್ಟು; ರಾಜ್ಯ ಸರ್ಕಾರ ಪ್ರೋತ್ಸಾಹಧನ ಪ್ರಕಟಿಸಿ ನಿಗದಿಪಡಿಸಿದ ದರ ಎಷ್ಟು ;

(ಇ) ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ಮೂಲಕ ಖರೀದಿಸಿದ ತೊಗರಿ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಎಷ್ಟು ರೈತರು ತೊಗರಿ ಖರೀದಿ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿದ್ದಾರೆ ; ಎಷ್ಟು ರೈತರಿಂದ ತೊಗರಿ ಖರೀದಿಸಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಸ್ಥಳೀಯ ಸಂಸ್ಥೆಗಳಲ್ಲಿ ಪ್ರಗತಿಯಲ್ಲಿರುವ ಯೋಜನೆಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) –**

೨೮ (೬೨) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾವೇರಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳ ಪುರಸಭೆ, ಪಟ್ಟಣ ಪಂಚಾಯತ್ ಹಾಗೂ ನಗರಸಭೆಗಳಲ್ಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ ; ಇದಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಸರ್ಕಾರದಿಂದ ಮಂಜೂರಾದ ಹಣದಿಂದ ಆಯಾಯ ಯೋಜನೆಗಳ ಅಡಿಯಲ್ಲಿ ಕಾಮಗಾರಿ ಪ್ರಾರಂಭವಾಗಿದೆಯೇ ;

(ಇ) ಹಾಗಿದ್ದಲ್ಲಿ, ಕಾಮಗಾರಿಗಳು ಯಾವ ಹಂತದಲ್ಲಿವೆ ; ಯಾವಾಗ ಮುಕ್ತಾಯಗೊಳ್ಳುತ್ತದೆ ;

ಈ) ವಿಶೇಷವಾಗಿ ನಗರೋತ್ಥಾನ ಅಡಿಯಲ್ಲಿ ಕೆಲಸ ಪ್ರಾರಂಭವಾಗಿದೆಯೇ ; ಹಾಗಿದ್ದರೆ, ಅದು ಯಾವ ಹಂತದಲ್ಲಿದೆ ; ಯಾವಾಗ ಮುಕ್ತಾಯಗೊಳ್ಳುತ್ತದೆ ?

## ಕಬ್ಬಿಗೆ ನಿಗದಿಪಡಿಸಿರುವ ಮೊಬಲಗು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೯ (೭೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ನೇ ಸಾಲಿನಲ್ಲಿ ಕಬ್ಬಿಗೆ ನಿಗದಿಪಡಿಸಿರುವ ಹಣವೆಷ್ಟು ;

(ಆ) ಮದ್ದೂರು ತಾ. ಕೊಪ್ಪ ಎಸ್.ಎಸ್.ಎಲ್. ಸರ್ಕಾರಿ ಕಾರ್ಖಾನೆಗೆ ಸರಬರಾಜು ಮಾಡಿರುವ ಕಬ್ಬಿಗೆ ರೂ. ೨,೧೦೦/– ಗಳನ್ನು ನೀಡಿ ರೈತರಿಗೆ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದರೆ, ರೈತರಿಗೆ ಈ ರೀತಿ ವಂಚನೆ ಮಾಡುತ್ತಿರುವ ಕಾರ್ಖಾನೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ? (ಪೂರ್ಣ ಮಾಹಿತಿ ನೀಡುವುದು)

## ಸಹಕಾರಿ ಕ್ಷೇತ್ರದಿಂದ ಎ.ಪಿ.ಎಂ.ಸಿ ನಿರ್ದೇಶಕರ ಆಯ್ಕೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೩೦ (೬೭) ಕೃಷಿ ಮಾರುಕಟ್ಟೆ ಮತ್ತು ತೋಟಕಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಹಕಾರಿ ಕ್ಷೇತ್ರದಿಂದ ಕೃಷಿ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ)ಗೆ ಒಬ್ಬ ನಿರ್ದೇಶಕರ ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆಯೇ ;

(ಆ) ಈ ಬಗ್ಗೆ ಎ.ಪಿ.ಎಂ.ಸಿ (Regulation Act 1966) ರಲ್ಲಿ ಕಲ್ಪಿಸಿರುವ ಅವಕಾಶವೇನು ;

(ಇ) ಇದನ್ನು ಎಲ್ಲಾ ರೀತಿಯ ಸಹಕಾರಿಗಳಿಗೆ ಅನ್ವಯಿಸುವಂತೆ ತಿದ್ದುಪಡಿ ತರಲು ಇರುವ ಸಮಸ್ಯೆ ಏನು ?

ವಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ.–203 ಪ್ರತಿಗಳು – 1000 – ಪಿ8